

# ಮಲ್ಲಳ್ಳಿ ಮಿಂಚುಳ್ಳಿ

**ಕುಮಾರಧಾರಾ ನದಿ ಸೃಜಿಸಿರುವ ಮಲ್ಲಳ್ಳಿ ಜಲಪಾತ ಮಳೆಗಾಲದಲ್ಲಿ ಏರುಜವ್ವನದಿಂದ ಕಂಗೊಳಿಸುವ ಜಲಸುಂದರಿ.**

■ ಗಣಂಗೂರು ನಂಜೇಗೌಡ

ಪುಷ್ಪಗಿರಿ ಬೆಟ್ಟದಲ್ಲಿ ಹುಟ್ಟುವ ಕುಮಾರಧಾರಾ ನದಿ ತಾನು ಹುಟ್ಟಿದ ಸ್ಥಳದಿಂದ 9 ಕಿ.ಮೀ. ದೂರದಲ್ಲಿ, ಮಲ್ಲಳ್ಳಿ ಎಂಬಲ್ಲಿ ಜಲಪಾತದ ರೂಪ ತಳೆಯುತ್ತದೆ. 96 ಅಡಿ ಎತ್ತರದಿಂದ ಧುಮುಕುವ ಈ ಶ್ವೇತಸುಂದರಿ ಅರಸಿಕರೆದೆಯಲ್ಲೂ ರಾಗರಂಗಿನ ಕಂಪನಗಳನ್ನು ಮೂಡಿಸಬಲ್ಲ ಸೌಂದರ್ಯವತಿ.

ದಟ್ಟ ಕಾನನದ ನಡುವೆ, ಹೆಬ್ಬಂಡೆಗಳ ಹಾಸಿನಲ್ಲಿ ಭೋರ್ಗರೆಯುತ್ತಾ ಧುಮ್ಮಿಕ್ಕುವ ಕೊಡಗಿನ ಬೆಡಗಿ 'ಮಲ್ಲಳ್ಳಿ ಫಾಲ್ಸ್' ಹೆಸರಿನಿಂದ ಲೋಕಪ್ರಿಯ. ದೂರದಿಂದ ಶಿವನ ಜಡೆಯಿಂದಿಳಿಯುವ ಗಂಗೆಯಂತೆಯೂ, ಸಮೀಪದಿಂದ ಹತ್ತಿಯ ರಾಶಿಯಿಂದ ಪುಷ್ಪಗಿರಿಗೆ ಹತ್ತಿ ಹೋಗಲು ಮಾಡಿದ ಮೆಟ್ಟಿಲುಗಳಂತೆಯೂ ಜಲಪಾತ ಕಾಣಿಸುತ್ತದೆ.

ಮಲ್ಲಳ್ಳಿ ಜಲಪಾತ ಮಳೆಗಾಲದಲ್ಲಿ ಮೈದುಂಬಿಕೊಳ್ಳುತ್ತದೆ. ಇದನ್ನು 'ಮಳೆಗಾಲದ ಜಲಪಾತ' ಎಂದೂ ಕರೆಯುವುದುಂಟು. ಆಗಸ್ಟ್ ತಿಂಗಳಿನಿಂದ ಜನವರಿಯವರೆಗೆ ಕುಮಾರಧಾರಾ ನದಿ ಮನಸೋ ಇಚ್ಛೆ ಹರಿಯುತ್ತದೆ; ಏರುಜವ್ವನೆಯಂತೆ ಕಂಗೊಳಿಸುತ್ತದೆ. ವರ್ಷದಲ್ಲಿ 6 ತಿಂಗಳು ಇಲ್ಲಿ ಜಲವೈಭವ ಸೃಷ್ಟಿಯಾಗುತ್ತದೆ. ಜಲಪಾತದ ಭೋರ್ಗರೆತ ಒಂದೂವರೆ ಕಿ.ಮೀ. ದೂರದವರೆಗೂ ಮಾರ್ದನಿಸುತ್ತದೆ. ಜನವರಿ ನಂತರ ಜಲಪಾತ ಕರಗುತ್ತಾ ಕರಗುತ್ತಾ ಬಳುಕುವ ಬಳ್ಳಿಯಾಗುತ್ತದೆ; ಮೊರೆತವೂ ಕ್ಷೀಣಿಸುತ್ತದೆ.

ಮಲ್ಲಳ್ಳಿ ಚೆಲುವೆಯನ್ನು ತಟದವರೆಗೆ ಇಳಿದು ನೋಡುವುದೇ ಸೊಗಸು. ನಮ್ಮ ಮುಖಕ್ಕೆ ಜಲಪಾತದ ಹನಿಗಳ ಸಿಂಚನವಾಗಬೇಕಾದರೆ, ವಾಹನಗಳ ನಿಲುಗಡೆ ಸ್ಥಳದಿಂದ 530 ಮೆಟ್ಟಿಲುಗಳನ್ನು ಇಳಿದು, ಜಲಪಾತದ ಎದುರು ಹೋಗಿ ನಿಲ್ಲಬೇಕು. ದಿಬ್ಬದಿಂದ 10 ನಿಮಿಷದಲ್ಲಿ ಕೆಳಗೆ ಇಳಿಯಬಹುದು. ಮೆಟ್ಟಿಲುಗಳು ತೀರಾ ಕಡಿದಾಗಿವೆ. ಹಾಗಾಗಿ ವೃದ್ಧರು, ಆರೋಗ್ಯ ಸಮಸ್ಯೆ ಇರುವವರು, ಅಂಗವಿಕಲರು ಇಳಿಯುವುದು ಕಷ್ಟ. ದೃಢಕಾಯದವರು ಕೂಡ ನದಿಯ ನೀರಿಗೆ ಇಳಿಯುವುದು ನಿಷಿದ್ಧ.

ಬೆಟ್ಟದಳ್ಳಿ ಗ್ರಾ.ಪಂ. ವ್ಯಾಪ್ತಿಯಲ್ಲಿರುವ ಮಲ್ಲಳ್ಳಿ ಬಳಿ ಜಲಪಾತ ಸೃಷ್ಟಿಸುವ ಕುಮಾರಧಾರಾ ನದಿ, ಕೊಡಗು ಜಿಲ್ಲೆಯ ಪುಷ್ಪಗಿರಿ ಅರಣ್ಯ, ಹಾಸನ ಜಿಲ್ಲೆಯ ಬಿಸಿಲೆ ಅರಣ್ಯ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸುಬ್ರಹ್ಮಣ್ಯ ಅರಣ್ಯವನ್ನು ಸೀಳಿಕೊಂಡು ಹರಿಯುತ್ತದೆ. ಮಲ್ಲಳ್ಳಿಯಿಂದ ದಕ್ಷಿಣ ದಿಕ್ಕಿನತ್ತ ಮುನ್ನಡೆಯುವ ಇದು ಸುಬ್ರಹ್ಮಣ್ಯ, ಉಪ್ಪಿನಂಗಡಿ ಮೂಲಕ ಅರಬ್ಬೀ ಸಮುದ್ರದಲ್ಲಿ ಲೀನವಾಗುತ್ತದೆ.

ಮಲ್ಲಳ್ಳಿ ಫಾಲ್ಸ್ ಮೈಸೂರಿನಿಂದ 134 ಕಿ.ಮೀ., ಜಿಲ್ಲಾ ಕೇಂದ್ರ ಮಡಿಕೇರಿಯಿಂದ 40 ಕಿ.ಮೀ. ಹಾಗೂ ತಾಲ್ಲೂಕು ಕೇಂದ್ರ ಸೋಮವಾರಪೇಟೆಯಿಂದ 25 ಕಿ.ಮೀ. ದೂರದಲ್ಲಿದೆ. ಹಂಚಿನಳ್ಳಿ ತಿರುವಿನಿಂದ ಬಲಕ್ಕೆ 3 ಕಿ.ಮೀ. ಸಾಗಿದರೆ ಜಲಪಾತ ತಲುಪಬಹುದು. 3 ಕಿ.ಮೀ. ದೂರದ ಬೀದಳ್ಳಿಯವರೆಗೆ ಮಧ್ಯಾಹ್ನದ ವೇಳೆಯಲ್ಲಿ ಖಾಸಗಿ ಬಸ್‌ಗಳ ಸಂಚಾರವಿದೆ. ಸ್ವಂತ ಅಥವಾ ಬಾಡಿಗೆ ವಾಹನದಲ್ಲಿ ಹೋಗುವುದು ಉತ್ತಮ.

ಉಳಿದುಕೊಳ್ಳಲು ಹಂಚಳ್ಳಿ, ಬೀದಳ್ಳಿ, ಹೆಗ್ಗಡೆ ಮನೆ ಮತ್ತು ಆಸುಪಾಸಿನಲ್ಲಿ ಸಾಕಷ್ಟು ಹೋಂ ಸ್ಟೇಗಳಿವೆ. ಮಲ್ಲಳ್ಳಿ ಫಾಲ್ಸ್ ನೋಡಲು ಹೋಗುವವರು ಹಾರಂಗಿ ಜಲಾಶಯ, ಇಡುಕ್ಕಿ ಜಲಾಶಯ, ಟ್ರೀ ಪಾರ್ಕ್, ದುಬಾರೆ ಆನೆ ಶಿಬಿರ, ಕುಶಾಲನಗರದ ಗೋಲ್ಡನ್ ಟೆಂಪಲ್‌ಗಳನ್ನೂ ನೋಡಲು ಯೋಜನೆ ರೂಪಿಸಿಕೊಳ್ಳಬಹುದು.

ಪ್ರತಿಕ್ರಿಯಿಸಿ: feedback@sudha.co.in